ಹೌದು. 'ಇನ್ನೂ ಇನ್ನೂ ಅದೃಷ್ಟದ ಜೊತೆ ಜೂಜಾಡುವುದು ಬೇಡ' ಎಂದು ತೀರ್ಮಾನಿಸಿದ್ದರು ದಂಪತಿ. ಆದರೆ ಒಳಗಿಂದೊಳಗೆ ಆಸೆಯ ಕಿಡಿ ಉಳಿದುಕೊಂಡಿರಬೇಕು. 'ಅಪುತ್ರಸ್ಯ ಗತಿರ್ನಾಸ್ತಿ' ಎನ್ನುವ ಹೇಳಿಕೆಯ ಕುರಿತು ನಂಬಿಕೆ. ವಂಶದ ಹೆಸರನ್ನುಳಿಸಲು ಗಂಡುಮಗುವೊಂದು ಬೇಡವೇ? ಸತ್ತಾಗ ಪಿಂಡ ಹಾಕಿ ಸದ್ಗತಿ ಕೊಡಲು? ಯಾವುದು ಇಲ್ಲವೋ ಅದು ಭಯಂಕರ ಕೊರಗಾಗಿ ಬೆನ್ನು ಹತ್ತುತ್ತದೆ. ಅದರಲ್ಲೂ ಗೋವಿಂದಯ್ಯ, ಗಿರಿಜಮ್ಮನಂತಾ ಸಂಪ್ರದಾಯಸ್ಥ ಮನಸ್ಸುಗಳಿಗೆ. 'ಕಾಲ ಹಿಮ್ಮುಖವಾಗಿ ಚಲಿಸುತ್ತಿದೆ' ಅನಿಸುವಂತಾ ಅದೆಷ್ಟೋ ನಂಬಿಕೆಗಳು, ಸಂಪ್ರದಾಯಗಳು ತಪ್ಪದೆ ಪಾಲನೆಯಾಗುವಂತಾ ಸಮಾಜದಲ್ಲಿ ಹೀಗೆ ಯೋಚಿಸುವವರಿಗೆ ಬರಗಾಲ ಇಲ್ಲ. ವನಿತಾ ಎನ್ನುವ ನಾಲ್ಕನೆಯ ಹೆಣ್ಣಿನ ಹುಟ್ಟಿಗೆ ಈ ಎಲ್ಲಾ ನಂಬಿಕೆಗಳೂ ಕಾರಣವಾಗಿ, ನಾಲ್ಕನೆಯದೂ ಹೆಣ್ಣಾದಾಗ ಮಾನಸಿಕವಾಗಿ ಜರಿದು ಹೋದರು ದಂಪತಿ. 'ಖಾಸಗಿ ಹಿರಿಯ ಪ್ರಾಥಮಿಕಶಾಲೆ'ಯಲ್ಲಿ ಉಪಾಧ್ಯಾಯ ವೃತ್ತಿಯಲ್ಲಿದ್ದ ಗೋವಿಂದಯ್ಯನಿಗೆ ಕೈ ತುಂಬಾ ಸಂಬಳ ಬರುತ್ತಿರಲಿಲ್ಲ. ನಾಜೂಕಾಗಿ ಸಂಸಾರ ನಡೆಸುವುದರಲ್ಲಿ ಗಿರಿಜಮ್ಮ ಎಷ್ಟೇ ಪರಿಣತೆಯಾಗಿದ್ದರೂ ತಿಂಗಳ ಕೊನೆಯಲ್ಲಿ ಕಣ್ಣುಕಣ್ಣು ಬಿಡುವ ಪರಿಸ್ಥಿತಿ. ಇವರನ್ನೆಲ್ಲಾ ಸಾಕಿ, ಬೆಳೆಸಿ, ದಡ ಹತ್ತಿಸುವ ಕೆಲಸ ತನ್ನಿಂದ ಸಾಧ್ಯವೇ ಎನ್ನುವ ಕೊರಗು ಒಳಗೊಳಗೆ ಕುಟ್ಟೆಹುಳದಂತೆ ಗೋವಿಂದಯ್ಯನನ್ನು ಕೊರೆಯುತ್ತಿತ್ತು. ಅತ್ತ ಹಳ್ಳಿಗೆ ಹಳ್ಳಿಯೂ ಅಲ್ಲದ, ಇತ್ತ ಪೇಟೆಗೆ ಪೇಟೆಯೂ ಅಲ್ಲದ ಸಣ್ಣ ಊರಿನಲ್ಲಿ ಸ್ವಂತಕ್ಕೊಂದು ಮನೆ ಕಟ್ಟಿಸಿಕೊಂಡಿದ್ದು ಗೋವಿಂದಯ್ಯ ಜೀವನದಲ್ಲಿ ಸಾಧಿಸಿಕೊಂಡ ಪುರುಷಾರ್ಥ. ಇದಕ್ಕಾಗಿ ಗಿರಿಜಮ್ಮ ತೌರೂರಿನಿಂದ ಬಳುವಳಿಯಾಗಿ ಬಂದಿದ್ದ ಚೂರುಪಾರು ಚಿನ್ನವನ್ನು ತ್ಯಾಗ ಮಾಡಿ ಬಿಟ್ಟೋಲೆ ಗೌರಮ್ಮ ಆಗಿರುವುದು ಮತ್ತೊಂದು ಕತೆ. ಗಂಜಿ ಕುಡಿದುಕೊಂಡಿದ್ದರೂ ಮರ್ಯಾದೆಯಿಂದ ಬದುಕು ಮಾಡಿಕೊಂಡಿತ್ತು ಒಂದು ತುಂಬಿದ ಸಂಸಾರ.

★★★

ನಡುವಯಸ್ಸಲ್ಲಿ ಗೋವಿಂದಯ್ಯನಿಗೆ ಚೀಟಿ ಬಂತು. ವಿಧಿಲಿಖಿತ ಅನ್ನುವಂತೆ ತನ್ನಪ್ಪನ ಹಾಗೆ ತಾನೂ ಪ್ರಾಥಮಿಕಶಾಲೆಯಲ್ಲಿ ಬೋಧಕಿಯಾಗಿ ಸೇರಿಕೊಳ್ಳಬೇಕು ಎನ್ನುವ ಕೈಗೆಟುಕುವಂತಾ ಕನಸಿನ ಬೆನ್ನು ಬಿದ್ದಿದ್ದ ಭಾಗ್ಯ ಪಿ.ಯು.ಸಿ. ಮುಗಿಸಿ ಟೀಚರ್ಸ್ ಟ್ರೈನಿಂಗ್ ಮಾಡುತ್ತಿದ್ದಳು. ಒಂದು ಬಾಗಿಲು ಮುಚ್ಚಿತು, ಇನ್ನೊಂದು ತೆರೆದುಕೊಂಡಿತು. ತಂದೆಯದಾಗಿದ್ದ ಕೆಲಸ ಭಾಗ್ಯನಿಗೆ ದಕ್ಕಿತು. ಈ ಲೋಕದ ಯಾವ ಗೊಡವೆಯೂ ಬೇಡ ಎನ್ನುವಂತೆ ಕೋಣೆ ಸೇರಿಕೊಂಡಿದ್ದ ತಾಯಿಯೊಂದಿಗೆ ಐದು ವರ್ಷದ ಚಿಕ್ಕ ತಂಗಿಯನ್ನೂ ಸಂಭಾಳಿಸಿದಳು ಭಾಗ್ಯ. ಮುಂದೆ ಎರಡು ವರ್ಷಗಳಲ್ಲಿ ತಾಯಿಯೂ ತೀರಿಕೊಂಡು ಮೂವರು ತಂಗಿಯರಿಗೆ ಭಾಗ್ಯನೇ ತಾಯಿ, ತಂದೆ. ಹಲ್ಲು ಕಚ್ಚಿ ನೊಗ ಎಳೆಯುವಂತೆ ಮಾಡಿದ್ದು ಅವಳ ಅಂತಃಶಕ್ತಿ. ಅವಳ ಇಚ್ಛಾಶಕ್ತಿ.

★★★

ಭಾಗ್ಯಲಕ್ಷ್ಮಿ ಕೆಲಸ ಮಾಡುತ್ತಿದ್ದ ಖಾಸಗಿ ಶಾಲೆ ಮುಂದೆ ಅನುದಾನಿತ ಖಾಸಗಿಶಾಲೆಯಾಗಿ ಸರ್ಕಾರಿ ಸಂಬಳದ ಸವಲತ್ತು ಸಿಕ್ಕಿತು. ಆರ್ಥಿಕವಾಗಿ ಒಂದಲ್ಪ ಮಟ್ಟದ ಚೇತರಿಕೆ ಕಂಡುಕೊಂಡಿತು ಸಂಸಾರ. ತಂಗಿಯರಿಬ್ಬರಿಗೆ ಓದಿನ ಬಗ್ಗೆ ಇದ್ದ ನಿರಾಸಕ್ತಿಯನ್ನೋ, ಅಥವಾ ಮದುವೆಯ ಬಗ್ಗೆ ಇದ್ದ ಆಸಕ್ತಿಯನ್ನೋ ಗಮನಿಸಿ ಭಾಗ್ಯ ಅವರ ಮದುವೆ ಮಾಡಿ ಜವಾಬ್ದಾರಿ ನೀಗಿಕೊಂಡಳು. ಮುಂದೆ ವನಿತಾ ಕೂಡಾ ಓದಿನಲ್ಲಿ ಮುಂದೆ ಬರದೆ ಎಸ್ಸೆಸ್ಸೆಲ್ಸಿ ಮುಗಿಸಿ ಮನೆಗೆ ಕಚ್ಚಿಕೊಂಡಳು. ಮನೆಗೆಲಸಗಳ ಸಂಪೂರ್ಣ ಹೊಣೆ ಹೊತ್ತುಕೊಂಡು, ಮನೆಯಲ್ಲಿರುವ ಹೊತ್ತಿನಲ್ಲಿ ಅಕ್ಕನಿಗೆ ಬಿಡುವು ದೊರಕಿಸಿಕೊಟ್ಟಳು. ಹೊರಗಿನ ದುಡಿಮೆ ಭಾಗ್ಯಲಕ್ಷ್ಮಿಗೆ ಶಾಶ್ವತವಾಯ್ತು. ಮದುವೆಯಾಗಬೇಕಾದ ವಯಸ್ಸಿನಲ್ಲಿ ಅದಕ್ಕೆ ಮನಸ್ಸು ಕೊಡದೆ ತಂಗಿಯರಿಬ್ಬರ ಭವಿಷ್ಯ ರೂಪಿಸುವುದರಲ್ಲಿ ಅವಳ ಯೌವನ